# ಗೊರೂರರ ‘ವೈಯ್ಯಾರಿ’ ಕಥಾಸಂಕಲನದಲ್ಲಿನ ಮಹಿಳಾ ಪಾತ್ರಗಳು

ರಶ್ಮಿ ಪಿ.

ಸಂಶೋಧನಾರ್ಥಿ, ಸ್ನಾತಕೋತ್ತರ ಕನ್ನಡ ವಿಭಾಗ, ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು.

Received: 15/10/2024 ; Acepted: 01/11/2024 ; Published: 30/11/2024

DOI: https://doi.org/10.5281/zenodo.14246574

## ABSTRACT:

ಆಧುನಿಕ ಕನ್ನಡ ಸಾಹಿತ್ಯದ ನವೋದಯ ಕಾಲಘಟ್ಟದಲ್ಲಿ ಕಥಾಪ್ರಕಾರದಲ್ಲಿ ಸಾಧನೆ ಮಾಡಿದ ಹಿರಿಯ ಕಥೆಗಾರರ ಪೈಕಿ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಒಬ್ಬರು. ಇವರ 140ಕ್ಕೂ ಹೆಚ್ಚಿನ ಕಥೆಗಳು ಆರು ಕಥಾ ಸಂಕಲನಗಳಲ್ಲಿ ಹರಡಿಕೊಂಡಿವೆ. ಇವರ ‘ವೈಯ್ಯಾರಿ’ ಕಥಾ ಸಂಕಲನದಲ್ಲಿನ ‘ಭೂತಯ್ಯನ ಮಗ ಅಯ್ಯು’, ‘ಗಂಡುಬೀರಿ ಹೊಸಬಿ’, ‘ಪುಟ್ಟ ಮಲ್ಲಿಗೆ’, ‘ಈಡಿಗರ ಹೆಣ್ಣು’, ‘ಲಕ್ಕಿಯ ಗಂಡಂದಿರು’ ಎಂಬ ಕಥೆಗಳ ವ್ಯಾಪ್ತಿಯಲ್ಲಿ ಬರುವ ಮಹಿಳಾ ಪಾತ್ರಗಳನ್ನು ವಿವೇಚನೆ ಮಾಡುವುದು ಪ್ರಸ್ತುತ ಲೇಖನದ ಉದ್ದೇಶ. ಕೌಟುಂಬಿಕ ಜೀವನದಲ್ಲಿ ತಾಯಿಯಾಗಿ, ಸೊಸೆಯಾಗಿ, ಮಗಳಾಗಿ ಎಲ್ಲಾ ಅವಸ್ಥೆಗಳಲ್ಲಿ ತನ್ನ ಅಸ್ಮಿತೆಯ ಮುದ್ರೆಯನ್ನು ಒತ್ತುವ ಮಹಿಳೆ ಸಮಾಜದಲ್ಲಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಸಾಮಾಜಿಕ ವ್ಯವಸ್ಥೆಯೊಳಗೆ ಪುರುಷನಿಗೆ ದಾಸಳಾಗಿ ಅಸಹಾಯಕತೆಯಲ್ಲಿ ಇರುವುದು ಹೊಸದೇನಲ್ಲ. ಹಾಗೆಯೇ ಪುರುಷ ಪ್ರಧಾನ ವ್ಯವಸ್ಥೆ ಪರಂಪರೆ, ಸಂಪ್ರದಾಯದ ಹೆಸರಿನಲ್ಲಿ ಹೆಣ್ಣನ್ನು ಬಂಧಿಸಿದ್ದರೂ ಸಾಮಾಜಿಕ ಕಟ್ಟುಪಾಡುಗಳಿಗೆ ಸಿಕ್ಕಿಬಿದ್ದು ನಲುಗದೆ ಬಂಡಾಯ ಮನೋಧರ್ಮವನ್ನೊಂದಿರುವುದು ವಿಶಿಷ್ಟವಾಗಿದೆ. ಈ ಮೇಲಿನ ಕಥೆಗಳಲ್ಲಿ ಇಂತಹ ಎರಡೂ ಬಗೆಯ ಪಾತ್ರಗಳನ್ನು ಲೇಖನದ ಮೂಲಕ ವಿವೇಚಿಸುವ ಪ್ರಯತ್ನ ಮಾಡಲಾಗಿದೆ.

## KEYWORDS:

ಗೊರೂರು, ಕಥೆ, ಲಲಿತೆ, ಪುಟ್ಟಮಲ್ಲಿಗೆ, ಪುರುಷ, ಸಮಾಜ, ವಿಧವಾ ವಿವಾಹ.

ಬರವಣಿಗೆಯಿಂದ ಮಾತ್ರವಲ್ಲದೆ ಬದುಕಿನಿಂದಲು ಕನ್ನಡಿಗರ ಮನಸ್ಸಿನಲ್ಲಿ ಉಳಿದಿರುವಂತಹ ಆಧುನಿಕ ಕನ್ನಡ ಸಾಹಿತ್ಯದ ಲೇಖಕರು ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು. ಸ್ವಾತಂತ್ರ್ಯ ಹೋರಾಟಗಾರರಾಗಿ, ಗಾಂಧಿ ಚಿಂತನೆಗಳಿಂದ ಪ್ರಭಾವಿತರಾಗಿ ನವೋದಯ ಕಾಲಘಟ್ಟದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಹಾಸ್ಯ ಪ್ರಬಂಧಕಾರರೆಂದು ಪ್ರಸಿದ್ಧಿಯಾಗಿದ್ದಾರೆ. ಇವರು ವೈಯ್ಯಾರಿ, ಉಸುಬು, ಶಿವರಾತ್ರಿ, ಗೋಪುರದ ಬಾಗಿಲು, ಕಮ್ಮಾರ ವೀರಭದ್ರಾಚಾರಿ

ಹಾಗೂ ಕನ್ಯಾಕುಮಾರಿ ಮತ್ತು ಇತರ ಕಥೆಗಳು ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಸುಮಾರು 140ಕ್ಕೂ ಹೆಚ್ಚಿನ ಕಥೆಗಳು ಅಡಕವಾಗಿವೆ. ಗೊರೂರು ಅವರ ಸಮಕಾಲೀನರಲ್ಲಿ ಮಾಸ್ತಿ ಅವರನ್ನು ಹೊರತುಪಡಿಸಿದರೆ ಈ ಪರಿ ಕಥೆಗಳನ್ನು ರಚಿಸಿದವರಲ್ಲಿ ನಂತರದ ಸ್ಥಾನ ಪಡೆದುಕೊಂಡವರು ಇವರೇ. ಇವರ ಕಥೆಗಳಲ್ಲಿ ಬಹುಪಾಲು ಕಥೆಗಳು ಲಲಿತ ಪ್ರಬಂಧದ ಲಕ್ಷಣವನ್ನು ಹೋಲುವುದು ಸಹಜವಾಗಿದೆ. ಪ್ರಬಂಧಗಳಂತೆ ಇವರ ಕಥೆಗಳೆಲ್ಲವೂ ಗಾಂಧೀಜಿಯವರ ಗ್ರಾಮೋದ್ಧಾರ, ಹರಿಜನೋದ್ಧಾರ, ಗ್ರಾಮ ಜಾನಪದ, ಸಹಬಾಳ್ವೆಯ ಬದುಕು ಮುಂತಾದ ಅಂಶಗಳನ್ನು ಒಳಗೊಂಡಿದೆ. ಜೊತೆಗೆ ಗೊರೂರರು ಚಿತ್ರಿಸುವ ವಿಶಿಷ್ಟಪೂರ್ಣ ಮಹಿಳಾ ಬದುಕು ಅವರ ಕಥೆಗಳಲ್ಲಿ ಇದೆ.

1941ರಲ್ಲಿ ಪ್ರಕಟಗೊಂಡ 'ವೈಯ್ಯಾರಿ' ಕಥಾಸಂಕಲನವು 'ಗ್ರಾಮ ಪಂಚಾಯತಿ ಅಧ್ಯಕ್ಷ ಗೌಡರು', 'ಹಾವಿನ ಅಯ್ಯ', 'ಸಫಲ ಜೀವನ', 'ಶೌರ್ಯ-ಔದಾರ್ಯ', 'ಕಲಾವಿನ ಸ್ಫೂರ್ತಿ', 'ಪುಟ್ಟ ಮಲ್ಲಿಗೆ', 'ಈಡಿಗರ ಹೆಣ್ಣು' ಎಂಬ ಮೊದಲಾದ ಹದಿಮೂರು ಕಥೆಗಳನ್ನೊಳಗೊಂಡಿದೆ. ಈ ಕಥಾಸಂಕಲನದಲ್ಲಿನ 'ಭೂತಯ್ಯನ ಮಗ ಅಯ್ಯು', 'ಗಂಡುಬೀರಿ ಹೊಸಬಿ', 'ಪುಟ್ಟಮಲ್ಲಿಗೆ', 'ಈಡಿಗರ ಹೆಣ್ಣು', 'ಲಕ್ಕಿಯ ಗಂಡಂದಿರು' ಎಂಬ ಕಥೆಗಳ ವ್ಯಾಪ್ತಿಯಲ್ಲಿ ಅಲ್ಲಿನ ಮಹಿಳಾ ಪಾತ್ರಗಳನ್ನು ವಿವೇಚನೆ ಮಾಡುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ.

ಮಹಿಳೆ ಪುರುಷನಿಗೆ ಅಧೀನಳಾಗಿರುವಂತೆ ಹಲವು ಹುನ್ನಾರಗಳನ್ನು ಪುರುಷ ಪ್ರಧಾನ ವ್ಯವಸ್ಥೆ ಶತಶತಮಾನಗಳಿಂದ ರೂಪಿಸಿಕೊಂಡು ಬಂದಿದೆ. ಜೊತೆಗೆ ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ತಮಗೆ ಬೇಕಾದ ರೀತಿಯಲ್ಲಿ ಕುಣಿಸಿಕೊಂಡು ಮಹಿಳೆಯರ ಸ್ವಾತಂತ್ರ್ಯ ಮಾತ್ರವಲ್ಲದೇ ಅವರ ಅಸ್ಮಿತೆಯನ್ನು ಕೂಡ ಕಸಿದುಕೊಂಡಿದೆ. ಇನ್ನು ಮಹಿಳೆಯು ಆದರ್ಶಳಾಗಿರಬೇಕು, ಪತೀವ್ರತಾಗುಣ ಹೊಂದಿರಬೇಕು, ಸಂಯಮದಿಂದಿರಬೇಕು, ಕ್ಷಮಯಾಧರಿತ್ರಿ ಆಗಿರಬೇಕು ಎಂಬಿತ್ಯಾದಿ ಪರಿಕಲ್ಪನೆಗಳೆಲ್ಲವೂ ಪಿತೃಪ್ರಧಾನ ವ್ಯವಸ್ಥೆ ತನ್ನ ಅನುಕೂಲಕ್ಕೆ ತಕ್ಕ ಹಾಗೆ ನಿರ್ಮಿಸಿದ ಪರಿಕಲ್ಪನೆಗಳು. ಇವುಗಳನ್ನು ಒಪ್ಪಿಕೊಂಡು, ನಂಬಿಕೊಂಡು ಇಂದಿಗೂ ಪಾಲಿಸುತ್ತಿರುವುದು ದುರದೃಷ್ಟಕರ ಸಂಗತಿ.

ಗೊರೂರರು ಯಾವುದೇ ಉದ್ದೇಶಿತ ಕಲೆಯನ್ನು ಕಥೆಯಲ್ಲಿ ಪ್ರತಿಬಿಂಬಿಸದೆ ಬಹಳ ಸೊಗಸಾಗಿ ಚಿತ್ರಿಸಿದ್ದಾರೆ. ಕೆಲವೊಮ್ಮೆ ಕಥೆಯೊಳಗೆ ತಾವೂ ಒಂದು ಪಾತ್ರವಾಗಿ ಬಿಡುತ್ತಾರೆ, ಪಾತ್ರದಂತೆ ನಿರೂಪಿಸುತ್ತಾರೆ ಹಾಗೂ ಸಮಸ್ಯೆಗಳಿಗೆ ಪರಿಹಾರಗಳನ್ನು ಅನ್ವೇಷಣೆ ಮಾಡುತ್ತಾರೆ. 'ಪುಟ್ಟಮಲ್ಲಿಗೆ', 'ವೈಯ್ಯಾರಿ', 'ಗಂಡುಬೀರಿ ಹೊಸಬಿ', 'ಲಕ್ಕಿಯ ಗಂಡಂದಿರು' ಈ ಕಥೆಗಳೆಲ್ಲವೂ ಸ್ತ್ರೀ ಕೇಂದ್ರಿತವಾಗಿ ರಚನೆಯಾಗಿರುವಂತದ್ದು.

ಈ ಕಥೆಗಳು ಗ್ರಾಮೀಣ ಬದುಕಿನ ಮೇಲುಕೀಳು, ಹೊಂದಾಣಿಕೆ ಎಂಬ ಬದುಕಿನ ಸಹಜತೆಯನ್ನು ನಿದರ್ಶಿಸುತ್ತವೆ. ಈ ಸಂಕಲನದ ಮೊದಲ ಕಥೆಯಾದ 'ವೈಯ್ಯಾರಿ'ಯು ದ.ರಾ.ಬೇಂದ್ರೆಯವರ 'ಪುಟ್ಟವಿಧವೆ' ಕವಿತೆಯನ್ನು ನೆನಪಿಸುತ್ತದೆ. ಸಾಂಪ್ರದಾಯಿಕ ಸಮಾಜದಲ್ಲಿ ಸಂಪ್ರದಾಯದ ಹೆಸರಿನಲ್ಲಿ ನೋವನ್ನನುಭವಿಸುವ ಬಾಲವಿಧವೆಯ ಕಥೆ ಇದರ ವಸ್ತು. ಈ ಕಥೆಯ ಪ್ರಮುಖ ಪಾತ್ರ ಲಲಿತೆ. ಕಥೆಯು ಸಾಂಪ್ರದಾಯಿಕ ಸಮಾಜದಲ್ಲಿ ಬಾಲವಿಧವೆಯೊಬ್ಬಳ ಅಂತರಂಗದ ನೋವು, ಯಾತನೆ, ತಳಮಳಗಳನ್ನು ಚಿತ್ರಿಸುತ್ತದೆ. ಸಮಾಜ ಹೆಣ್ಣಿನ ಜೊತೆ ಹೇಗೆ ನಡೆದುಕೊಳ್ಳುತ್ತದೆ ಎಂಬುದರ ಜೊತೆಗೆ ಈ ಸಂಪ್ರದಾಯಬದ್ಧ ಸಮಾಜ ತೋರುವ ಕ್ರೌರ್ಯ ಓದುಗರಲ್ಲಿ ನಡುಕ ಹುಟ್ಟಿಸುತ್ತದೆ. ಪುಟ್ಟ ವಿಧವೆಯನ್ನು ಪುರುಷಪ್ರಧಾನ ವ್ಯವಸ್ಥೆ ನಡೆಸಿಕೊಳ್ಳುವ ಬಗ್ಗೆ ಒಂದೆಡೆಯಾದರೆ ಇದಕ್ಕೆ ಪರಿಹಾರ ವಿಧವಾ ವಿವಾಹ ಎಂಬುದು ಕಥೆಯಲ್ಲಿಯೇ ಕಾಣುತ್ತದೆ. ರಾಮಸ್ವಾಮಿ ಎಂಬ ಯುವಕ ಅನೇಕ ವಿರೋಧಗಳ ನಡುವೆಯೂ ಲಲಿತೆಯನ್ನು ಮದುವೆಯಾಗುತ್ತಾನೆ. ಈ ಮೂಲಕ ಸಮಸ್ಯೆಗಳ ಮಧ್ಯೆ ಕಥೆಗಾರರು ತಾವು ಮಧ್ಯಪ್ರವೇಶಿಸಿ ಈ ಕಥೆಯ ಸಮಸ್ಯೆಗೆ ಪರಿಹಾರ ಸೂಚಿಸುತ್ತಾರೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ತಮ್ಮ ಸಾಹಿತ್ಯದಲ್ಲಿ ವೈಧವ್ಯ ಸಮಸ್ಯೆಯ ಬಗ್ಗೆ ಸಾಕಷ್ಟು ಕಡೆ ಪ್ರಸ್ತಾಪಿಸುತ್ತಾರೆ. ವಿಧವೆಯ ಬದುಕಿನ ಕ್ರೂರತೆಯನ್ನು ಅವರು ಸಹಿಸುವುದಿಲ್ಲ. ವಿಧವೆಯ ಕುರಿತು ಇರುವ ನಂಬಿಕೆ, ಆಚಾರ ವಿಚಾರಗಳೆಲ್ಲವನ್ನು ಅವರು ಸಾಹಿತ್ಯದ ಹಲವು ಸಂದರ್ಭಗಳಲ್ಲಿ ಟೀಕಿಸುತ್ತಾ, ವಿಧವೆಯ ಬದುಕಿನ ಬಗ್ಗೆ ಕೆಲವು ಸಂದರ್ಭದಲ್ಲಿ ಅನುಕಂಪವನ್ನು ಸೂಚಿಸುತ್ತಾರೆ. ಆದರೆ ಈ ಕಥೆಯಲ್ಲಿ ಕೇವಲ ಅನುಕಂಪಕ್ಕೆ ಅವರ ವಿಚಾರ ನಿಲ್ಲದೆ, ಪುನರ್‌ವಿವಾಹದ ಪರಿಹಾರವನ್ನು ಧೈರ್ಯವಾಗಿ ಸೂಚಿಸುವುದು ವಿಶೇಷವಾಗಿದೆ.

'ಪುಟ್ಟ ಮಲ್ಲಿಗೆ' ಕಥೆಯಲ್ಲಿ ಪ್ರೇಮವು ಸಿರಿತನ ಬಡತನಕ್ಕೆ ವಿಚಲಿತವಾಗದೆ ವಿಜಯ ಸಾಧಿಸಿದ್ದನ್ನು ಮತ್ತು ಹಳ್ಳಿಯ ಮುಗ್ಧ ಜನರ ಮೇಲೆ ಮೂಢನಂಬಿಕೆಯಿಂದಾಗುವ ದುಷ್ಪರಿಣಾಮವನ್ನು ಕಲಾವಂತಿಕೆಯಿಂದ ಚಿತ್ರಿಸಿದ್ದಾರೆ. 'ಪುಟ್ಟಮಲ್ಲಿಗೆ' ಕಥೆಯ ಪ್ರಮುಖ ಪಾತ್ರವೇ ಪುಟ್ಟಮಲ್ಲಿಗೆ ಎಂಬ ಹೆಣ್ಣು. ಈಕೆಯ ತಂದೆ ನಿಂಗ. ಈತ ತೀರಿಹೋದ ಬಳಿಕ ಅವನ ಸಂಸಾರದಲ್ಲಿ ಬಂದೊದಗುವ ಕಷ್ಟ, ಸಾಲದು ಎಂಬಂತೆ ತಂದೆ ಇಲ್ಲದ ಹೆಣ್ಣು ಮಗಳ ಮೇಲೆ ಊರಿನಲ್ಲಿ ತಳವಾರನೆಂದೇ ಗುರುತಿಸಿಕೊಂಡಿರುವ ಕರಿಯ ಆಕೆಯನ್ನು ಮದುವೆಯಾಗಲು ಪೂಜಾರಿಯನ್ನು, ಬೇರೆ ಊರಿನಿಂದ ಬರುವ ಬುಡಬುಡಕೆಯವರನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಶಕುನಗಳಲ್ಲಿ ನಂಬಿಕೆಯನ್ನು ಇಟ್ಟಿದ್ದ ಪುಟ್ಟಮಲ್ಲಿಗೆಗೆ ಅದನ್ನೇ ಅಸ್ತ್ರವನ್ನಾಗಿ ಮಾಡಿಕೊಂಡು ಅವರಿಂದ ಸುಳ್ಳು ಶಕುನ ಹೇಳಿಸಿ ಮದುವೆಯಾಗಲು ಮುಂದಾಗುತ್ತಾನೆ. ಕರಿಯನ ಹಣದಿಂದ ಅವನಿಗೆ ಲಾಭ ಮಾಡಿಕೊಡುವ ಶಕುನ

ಹೇಳುವವರು ತಾನು ಒಂದು ಹೆಣ್ಣಾಗಿ ಮತ್ತೊಂದು ಹೆಣ್ಣಿಗೆ ಎಸಗುವ ದ್ರೋಹ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷ ನಿರ್ಮಿತ ಪರಿಕಲ್ಪನೆಗಳಿಂದ ಹೆಣ್ಣಿಗೆ ಅನ್ಯಾಯವಾಗುವುದರ ಜೊತೆಗೆ ಹೆಣ್ಣಿಂದಲೇ ಇನ್ನೊಂದು ಹೆಣ್ಣಿಗೆ ಅನ್ಯಾಯವಾಗುವುದಕ್ಕೆ ಪುರುಷನೇ ಪ್ರೇರೇಪಿಸುತ್ತಿರುವುದು ವಿಶಾದನೀಯ. ಮಹಿಳೆ ಮಹಿಳೆಯನ್ನೇ ದಬ್ಬಾಳಿಕೆ ಮಾಡಲು, ಶೋಷಣೆ ಮಾಡಲು ಇಂತಹ ವ್ಯವಸ್ಥೆಯೇ ಕಾರಣ. ಕರಿಯ ಹೂಡುವ ತಂತ್ರಗಳು ಕಥೆಯನ್ನು ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಪುಟ್ಟ ಮಲ್ಲಿಗೆಯನ್ನು ಪ್ರೀತಿಸುತ್ತಿರುವ ಬಸವಯ್ಯ ಶ್ರೀಮಂತ. ಆದರೆ ತನ್ನ ಪ್ರೀತಿಗಾಗಿ ತಂದೆಯ ವಿರೋಧ ಕಟ್ಟಿಕೊಂಡು ಕೂಲಿಯವನಂತೆ ನಾಟಕ ಮಾಡುವುದು ಒಂದೆಡೆಯಾದರೆ, ಪುಟ್ಟಮಲ್ಲಿಗೆಯೂ ಬಸವಯ್ಯನನ್ನು ಪ್ರೀತಿಸುತ್ತಾಳೆ. ಹಾಗಾಗಿ ಕಥೆಯುದ್ಧಕ್ಕೂ ಅನೇಕ ತಂತ್ರಗಳನ್ನು ಹೂಡುವ ಪ್ರಯತ್ನ ಕರಿಯನಿಂದ ನಡೆಯುತ್ತದೆ. ಆಕೆಗೆ ನಂಬಿಕೆ ಹುಟ್ಟಿಸಲು ಹೂಡುವ ತಂತ್ರಗಳನ್ನು ನೋಡಿದರೆ ನಾಟಕ, ಸುಳ್ಳು, ಮೋಸದ ಜಾಲದಲ್ಲಿ ಬಲಿಯಾಗುವವರು ಹೆಣ್ಣು ಎಂಬುದನ್ನು ಕಥೆಯಲ್ಲಿ ಕಾಣುತ್ತೇವೆ. ಕಥೆಯ ಅಂತ್ಯದಲ್ಲಿ ತಾನು ಪ್ರೀತಿಸಿದ ಬಸವಯ್ಯನನ್ನು ಪುಟ್ಟಮಲ್ಲಿಗೆ ಮದುವೆಯಾಗುತ್ತಾಳೆ ಹಾಗೂ ಆತ ಶ್ರೀಮಂತನೆಂಬುದೂ ತಿಳಿಯುತ್ತದೆ. ಅಲ್ಲಲ್ಲಿ ತಿಳಿಹಾಸ್ಯವೂ ಬರುತ್ತದೆ. ಆದರೆ ಕಥೆಯ ನಡುವಿನಲ್ಲಿ ಬರುವ ಹೆಣ್ಣಿನ ತೊಳಲಾಟ ಸುಳ್ಳಿನ ಸಂಕೋಲೆಯಲ್ಲಿ ಬೀಳುವ ಹೆಣ್ಣು ಪುರುಷನ ಸ್ವಾರ್ಥದಲ್ಲೇ ಪ್ರೀತಿಯ ವಿಜಯ ಸಾಧಿಸಿ ಬದುಕುವುದು ವಿಶಿಷ್ಟವೆನಿಸುತ್ತದೆ.

ಸಮಾಜವಿಧಿತ ಕಟ್ಟುಪಾಡುಗಳನ್ನು ವಿರೋಧಿಸಿದಂತಹ, ಮನುಷ್ಯ ನಿರ್ಮಿಸಿರುವ ಧರ್ಮ ಪರಿಪಾಲನೆ ಮಾಡದೆ ಇರುವಂತಹ ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ಪುರುಷ ನಿರ್ಮಿತ ಪರಿಕಲ್ಪನೆಗಳನ್ನು ಧಿಕ್ಕರಿಸುವ ಹೆಣ್ಣಿಗೆ ಸಮಾಜವು ಕೊಡ ಮಾಡುವ ಬಿರುದು ಗಂಡುಬೀರಿ. ಅಂತದ್ದೇ ಶೀರ್ಷಿಕೆ ಹಾಗೂ ವಸ್ತುವನ್ನೊಂದಿರುವ ಕಥೆ 'ಗಂಡುಬೀರಿ ಹೊಸಬಿ'. ಹೊಸಬಿ ಜೀತಪದ್ಧತಿಯನ್ನು ತಿರಸ್ಕರಿಸಿ ಸ್ವಾತಂತ್ರ್ಯಕ್ಕಾಗಿ ತುಡಿಯುವ ಮನಸ್ಥಿತಿಯ ಹೆಣ್ಣು. ಬ್ರಾಹ್ಮಣರಂತೆ ಮಡಿವಂತಿಕೆಯನ್ನು ಪಾಲಿಸಿಕೊಂಡು ಸ್ವಂತ ದುಡಿಮೆಯಲ್ಲಿ ಸ್ವತಂತ್ರವಾಗಿ ಬದುಕು ನಿರ್ವಹಿಸುವುದನ್ನು ಈ ಕಥೆ ಚಿತ್ರಿಸುತ್ತದೆ. ಈಕೆಯ ಬಂಡಾಯ ಧೋರಣೆಗೆ ಆಕೆಯ ಸುತ್ತಲ ಪರಿಸರ, ತಂದೆಯ ಒತ್ತಡ, ಬೇಜವಾಬ್ದಾರಿತನ ಕಾರಣವಾಗಿ ಕಾಣುತ್ತದೆ. ಕಥೆಯಲ್ಲಿ ಬರುವ ಈ ಸ್ತ್ರೀಪಾತ್ರ ಗಂಡುಬೀರಿ ಅನ್ನಿಸಿಕೊಂಡರೂ ಅವಳು ಪುರುಷ ಪ್ರಧಾನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮೀರುವುದಕ್ಕೆ ಸಾಧ್ಯವಾಗುತ್ತಿಲ್ಲವೇನೋ ಅನ್ನಿಸುತ್ತದೆ. ಅದಕ್ಕೆ ಕಥೆಯಲ್ಲಿಯೇ ಓದುಗರಿಗೆ ಉತ್ತರ ಸಿಗುತ್ತದೆ. ಶತಶತಮಾನಗಳಿಂದ ನಿರ್ಮಿತವಾಗಿರುವ ಪಿತೃ ಪ್ರಧಾನವ್ಯವಸ್ಥೆಯ ಸೂಕ್ಷ್ಮತೆಯನ್ನು ಹೆಣ್ಣು ಅರಿಯುವುದಕ್ಕೆ ಮತ್ತು ಮೀರುವುದಕ್ಕೆ ಒಂದು ಜನ್ಮದಲ್ಲಿ ಸಾಧ್ಯವೆ? ಎಂಬ

ಪ್ರಶ್ನೆ ಓದುಗರಿಗೆ ಕಾಡುತ್ತದೆ.

'ಭೂತಯ್ಯನ ಮಗ ಅಯ್ಯು' ಕಥೆಯು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಒಳಗೆ ಅತ್ಯಂತ ಶ್ರೇಷ್ಠ ಕಥೆಗಳ ಸಾಲಿನಲ್ಲಿ ನಿಲ್ಲಬಲ್ಲಂತಹ ಕಥೆ. 1974ರಲ್ಲಿ ಸಿದ್ದಲಿಂಗಯ್ಯನವರ ನಿರ್ದೇಶನದಲ್ಲಿ ಸಿನಿಮಾ ಕೂಡ ಅಗಿ ತೆರೆಕಂಡಿತು. ಶೋಷಣೆ ಮತ್ತು ಸಾಮರಸ್ಯವೆಂಬ ವೈರುಧ್ಯಗಳನ್ನು ಚಿತ್ರಿಸುವ ಈ ಕಥೆಯು ವಿಶಿಷ್ಟವಾಗಿದೆ ಮತ್ತು ನೀಳ್ಗತೆಯಾದರೂ ಕಾದಂಬರಿಯೋಪಾದಿಯಲ್ಲಿ ವಿಷಯಗಳನ್ನು ಸಂಗ್ರಹಿಸಿಕೊಂಡಿದೆ. ಈ ಕಥೆಯ ಆರಂಭದಲ್ಲಿ ಭೂತಯ್ಯನೇ ಮುಖ್ಯ ಪಾತ್ರವಾಗಿ ಕಂಡುಬಂದರೂ ಈ ಕಥೆಯ ಮುಖ್ಯರೂವಾರಿಗಳು ಗುಳ್ಳ ಮತ್ತು ಅಯ್ಯು. ಈ ಕಥೆಯು ಸ್ತ್ರೀ ಕೇಂದ್ರೀತವಾಗಿ ರಚನೆಯಾಗಿಲ್ಲವಾದರೂ ಕಥೆಯಲ್ಲಿನ ಅಯ್ಯು ಮತ್ತು ಗುಳ್ಳನ ಮಡದಿಯರು ಮುಖ್ಯವಾಗಿ ಕಾಣುತ್ತಾರೆ. ಇವರಿಬ್ಬರ ಗುಣಗಳಿಗೆ ವಿರುದ್ಧವಾಗಿ ಅಯ್ಯು ಮತ್ತು ಗುಳ್ಳನ ವ್ಯಕ್ತಿತ್ವಗಳು ಕಥೆಯಲ್ಲಿ ಹೊಸ ರೂಪವನ್ನೇ ಪಡೆದುಕೊಂಡಿವೆ. ಪ್ರಸ್ತುತತೆಯನ್ನು ಇಂದಿಗೂ ಉಳಿಸಿಕೊಂಡಿರುವ ಈ ಕಥೆಯಲ್ಲಿ ವಾಸ್ತವ ಸಮಾಜದಲ್ಲಿ ಕಾಣಸಿಗುವ ವ್ಯಕ್ತಿಗಳನ್ನು ಇಲ್ಲಿನ ಪಾತ್ರಗಳು ನೆನಪಿಸುತ್ತವೆ. ಇಲ್ಲಿನ ಸ್ತ್ರೀ ಪಾತ್ರಗಳು ಸೈರಣೆ ಮತ್ತು ಮನೋಸ್ಥೈರ್ಯವನ್ನೇ ಜನ್ಮವೆತ್ತಂತೆ ಕಾಣುತ್ತದೆ. ಇವರಿಬ್ಬರೂ ಹೇಗೆ ಪುರುಷ ನಿರ್ಮಿತ ಪರಿಕಲ್ಪನೆಗಳನ್ನು, ಮನಸ್ಥಿತಿಗಳನ್ನು ಒಪ್ಪಿಕೊಂಡು ಮತ್ತು ತಾಳಿಕೊಂಡು ಬಾಳುತ್ತಾರೆ ಎಂಬುದು ಇವರಿಬ್ಬರ ಗಟ್ಟಿತನವನ್ನು ತೋರಿಸುತ್ತದೆ. ಒಬ್ಬರನ್ನೊಬ್ಬರು ಕಂಡರೆ ಕತ್ತಿ ಮಸೆಯುವಂತಹ ಬದ್ಧ ದ್ವೇಷಿಗಳು ಗುಳ್ಳ ಮತ್ತು ಅಯ್ಯು. ಆದರೆ ಗುಳ್ಳ ಮತ್ತು ಅಯ್ಯುವಿನ ಹೆಂಡತಿಯರು ಒಂದೇ ಊರಿನವರಾದ ಕಾರಣ ಇಬ್ಬರ ನಡುವೆ ಆತ್ಮೀಯತೆ, ಅನುಕಂಪ, ಸ್ನೇಹ, ಸಲುಗೆ ಇತ್ತು. ಒಂದೇ ಊರಿಗೆ ಮದುವೆಯಾದ ಕಾರಣ ತನಗೊಬ್ಬ ಜೊತೆಗಾತಿ ಸಿಕ್ಕಿದಳು, ಕಷ್ಟ ಸುಖಕ್ಕೆ ಆಗುತ್ತಾಳೆಂದು ಹೆಣ್ಣು ಬಯಸುವುದು ಸಹಜ. ತವರನ್ನು ಬಿಟ್ಟು ಬಂದ ಗುಳ್ಳನ ಹೆಂಡತಿ ಹೀಗೆ ಅಂದುಕೊಳ್ಳುವ ಹೊತ್ತಿಗೆ ಇವರ ದ್ವೇಷ ಮಿತಿಮೀರಿರುತ್ತದೆ. ಅವರ ಕೋಪಕ್ಕೆ ತುತ್ತಾಗಿ ಗಂಡಂದಿರ ಮಾತಿಗೆ ಇಬ್ಬರೂ ತಲೆಬಾಗಿ ಕೇವಲ ಪರಿಚಯದವರಂತೆ ಇರುತ್ತಾರೆ. ಒಮ್ಮೆ ಗುಳ್ಳನ ಹೆಂಡತಿ ನದಿಯಲ್ಲಿ ಧುಮುಕಿದಾಗ ನೀರಿಗೆ ಇಳಿದು ಆಕೆಯನ್ನು ರಕ್ಷಿಸಲು ಅಯ್ಯುವನ್ನು ಬಿಟ್ಟರೆ ಊರಿನವರು ಯಾರೂ ಧೈರ್ಯ ಮಾಡುವುದಿಲ್ಲ. ಕೊನೆಗೆ ಅಯ್ಯು ಆ ಪ್ರವಾಹದಲ್ಲಿ ಮುಳುಗುತ್ತಿರುವ ಗುಳ್ಳನ ಹೆಂಡತಿಯನ್ನು ರಕ್ಷಿಸಿ ಹೊತ್ತು ತರುತ್ತಾನೆ. ಆ ಸಂದರ್ಭದಲ್ಲಿಯೇ ಅಯ್ಯುವಿನಲ್ಲಿ ಗುಳ್ಳನ ಮೇಲೆ ಇದ್ದಂತಹ ದ್ವೇಷ ಒಮ್ಮೆಲೇ ನೀರಾಗಿ ಹೋಗುತ್ತದೆ. ಆದರೆ ಗುಳ್ಳನ ದ್ವೇಷ ಮಾತ್ರ ಅಯ್ಯುವಿನ ಮೇಲೆ ಇನ್ನೂ ಕಡಿಮೆಯಾಗಿರುವುದಿಲ್ಲ. 14 ವರ್ಷಗಳ ನಂತರ ಅಂದರೆ ಕಥೆಯ ಕೊನೆಯ ಭಾಗದಲ್ಲಿ ನದಿಯ ಪ್ರವಾಹ ಹೆಚ್ಚಾಗಿ ಅಯ್ಯುವಿನ ಹೆಂಡತಿ, ಮಕ್ಕಳು ನೀರು ಪಾಲಾಗುವ ಸಂದರ್ಭ ಬಂದಾಗ ಗುಳ್ಳ

ಜೀವದ ಹಂಗು ತೊರೆದು ಅಯ್ಯುವಿನ ಕುಟುಂಬವನ್ನು ಕಾಪಾಡುತ್ತಾನೆ. ಈ ಕಥೆಯಲ್ಲಿ ಗುಳ್ಳ ಮತ್ತು ಅಯ್ಯುವಿನ ದ್ವೇಷ ಅಂತ್ಯ ಕಾಣಲು ಕಾರಣರಾದ ಎರಡು ಪಾತ್ರಗಳೇ ಇವರಿಬ್ಬರ ಹೆಂಡತಿಯರು. ಈ ಕಥಾ ಭಾಗದಲ್ಲಿ ಗುಳ್ಳ ಮತ್ತು ಅಯ್ಯುವಿನ ಪಾತ್ರ ಬಹುಪಾಲು. ಆದರೆ ಇವರಿಬ್ಬರ ಹೆಂಡತಿಯರು ಕಥೆಯಲ್ಲಿ ಮುಖ್ಯ ಪಾತ್ರವಾಗದೆ ಅಲ್ಲಲ್ಲಿ ಕಂಡುಬಂದರೂ ಕಥೆ ಒಂದು ತಿರುವನ್ನು ಪಡೆದುಕೊಳ್ಳಲು ಇವರಿಬ್ಬರೂ ಕಾರಣರಾಗುತ್ತಾರೆ. ವಿಮರ್ಶಕರಾದ ಎಲ್.ಎಸ್.ಶೇಷಗಿರಿರಾವ್‌ರವರು ಈ ಕಥೆಯನ್ನು ವಿಮರ್ಶೆ ಮಾಡುತ್ತಾ "ಕನ್ನಡದ ಶ್ರೇಷ್ಠಕತೆಗಳಲ್ಲಿ ಇದು ಒಂದು. ಮನುಷ್ಯಸ್ವಭಾವದ ಚಿತ್ರಣದಲ್ಲಿ ವಾಸ್ತವಿಕತೆಯನ್ನು ಈ ಗಾತ್ರದ ಬರಹದಲ್ಲಿ ಇಷ್ಟರಮಟ್ಟಿಗೆ ಭಾವಾತಿರೇಕಕ್ಕೆ ಎಡೆಕೊಡದೆ ಸಾಧಿಸಿರುವ ಕಥೆಗಳು ಕಡಮೆ"[1] ಎಂದು ಅಭಿಪ್ರಾಯಪಟ್ಟಿದ್ದಾರೆ.

'ಲಕ್ಕಿಯ ಗಂಡಂದಿರು' ಕಥೆಯಲ್ಲಿ ಆಸರೆಯನ್ನು ಕಳೆದುಕೊಂಡ ಹೆಣ್ಣೊಬ್ಬಳನ್ನು ಪುರುಷ ಸಂಕುಲ ಹೇಗೆ ತನ್ನ ಸ್ವಾರ್ಥಕ್ಕಾಗಿ ದುರುಪಯೋಗಪಡಿಸಿಕೊಳ್ಳಲು ಸಂಚು ರೂಪಿಸುತ್ತದೆ ಎಂಬ ವಿವಿಧ ಚಿತ್ರಗಳನ್ನು ಅನಾವರಣಗೊಳಿಸಿದ್ದಾರೆ. ಕಥೆಯಲ್ಲಿ ಲಕ್ಕಿಯ ಗಂಡ ತೀರಿ ಹೋಗುತ್ತಾನೆ. ನಂತರ ಆಕೆಯನ್ನು ಮದುವೆಯಾಗಲು ಆಕೆಯ ಬಳಿ ಇದ್ದ ಆಸ್ತಿಯನ್ನು ಕಬಳಿಸಲು ತೊಂಭತ್ತು ವರ್ಷದ ದೊಡ್ಡಬೋರ ತನ್ನ ನಾಲ್ಕನೇ ಹೆಂಡತಿಯಾಗಿ ಲಕ್ಕಿಯನ್ನು ಮದುವೆಯಾಗುತ್ತೇನೆಂದು ಊರಿನ ತುಂಬಾ ಸುದ್ದಿಯನ್ನು ಹಬ್ಬಿಸಿ ಜನರು ಆಶ್ಚರ್ಯ ಪಡುವಂತೆ ಮಾಡುತ್ತಾನೆ. ಈತನ ಮಗ ಕೆಂಗ ತಂದೆಗೆ ಬುದ್ಧಿ ಹೇಳಲು ಹೋದಾಗ ದೊಡ್ಡ ಬೋರ "ನನ್ನ ಮುಪ್ಪು ಒಂದೇ, ನಿನ್ನ ಯೌವನವು ಒಂದೇ. ತಿಮ್ಮನ ಹತ್ತು ಸಾವಿರ ಆಸ್ತಿ ದಕ್ತದೆ" ಎಂಬ ಮಾತನ್ನು ಹೇಳುವ ಮೂಲಕ ಪುರುಷನೊಬ್ಬನ ಸ್ವಾರ್ಥವನ್ನು ಕಥೆ ತೆರೆದಿಡುತ್ತದೆ. ಅಸಲಿಗೆ ದೊಡ್ಡಬೋರನ ಮೊಮ್ಮಗನೇ ತೀರಿ ಹೋಗಿರುವ ಲಕ್ಕಿಯ ಗಂಡ ತಿಮ್ಮ. ಒಂದರ್ಥದಲ್ಲಿ ಮೊಮ್ಮಗಳಾಗಿರುವ ಲಕ್ಕಿಯನ್ನು ಮದುವೆಯಾಗುವುದು ಅಥವಾ ಆಸ್ತಿಗಾಗಿ ಮದುವೆಯ ಮೂಲಕ ಆಕೆಯ ಬದುಕನ್ನು ಹಾಳುಗೆಡವಲು ಹೊರಟಿರುವ ದೊಡ್ಡ ಬೋರನಂತಹ ವ್ಯಕ್ತಿಗಳು ಸಮಾಜದಲ್ಲಿ ಇರುವಂತವರೇ. ಹಣಕ್ಕೆ ನೀಡಿರುವ ಬೆಲೆಯನ್ನು ಹೆಣ್ಣಿಗಾಗಲಿ, ಆಕೆಯ ಬದುಕಿಗಾಗಲಿ, ಬವಣೆಗಾಗಲಿ ನೀಡಿಲ್ಲವೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಆಕೆಯ ಮುಗ್ಧತೆಯನ್ನು ಆಕೆಯಲ್ಲಿರುವ ಮೌಲ್ಯವನ್ನು ಹೇಗೆ ವ್ಯವಸ್ಥೆ ಬಳಸಿಕೊಳ್ಳುತ್ತಿದೆ ಎಂಬುದನ್ನು ಕಥೆ ವ್ಯಕ್ತಪಡಿಸುತ್ತದೆ.

ಹಾಗೆಯೇ 'ಈಡಿಗರ ಹೆಣ್ಣು' ಕಥೆಯ ಪ್ರಮುಖ ಪಾತ್ರ ಲಕ್ಷ್ಮಿ. ಈಕೆಯನ್ನು ಪ್ರೀತಿ ಮಾಡುವ ಮಾಧು ಮೇಲ್ವರ್ಗದವನು. ಮೇಲ್ವರ್ಗದ ಮೇಲೆ ಸವಾಲೆಸೆದಂತೆ ಈತ ತನ್ನ ವಿದ್ಯೆ, ಜಾತಿ ಎಲ್ಲವನ್ನು ತ್ಯಾಗ ಮಾಡುವ ಮನಸುಳ್ಳವನು. ಈಡಿಗರ

ಹೆಣ್ಣಾದ ಲಕ್ಷ್ಮಿಯ ಪ್ರೀತಿಯನ್ನು ಮಾಧು ಪಡೆದುಕೊಂಡಿದ್ದು ಈ ಕಥೆಯ ಆಶಯವಾಗಿದೆ. ಸಮಾಜದಲ್ಲಿ ನಡೆಯುವ ಸಾರ್ವಕಾಲಿಕ ಸತ್ಯ ಘಟನೆಗಳನ್ನು ಗೊರೂರರು ವ್ಯಂಗ್ಯ ಮಾಡುತ್ತಾ ವಿಶ್ಲೇಷಿಸಿದ್ದಾರೆ.

ಕಥೆಯಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಗಂಡನನ್ನು ಕಳೆದುಕೊಂಡ ಹೆಣ್ಣಿನ ಸ್ಥಿತಿ ಹಾಗೂ ಪುರುಷರು ಮಹಿಳೆಯರ ಬಗ್ಗೆ ಹೊಂದಿದ್ದ ಮನೋಧೋರಣೆಯನ್ನು ಸಾಮಾಜಿಕ ವ್ಯವಸ್ಥೆಯಲ್ಲಿದ್ದ ಸತ್ಯಾಸತ್ಯತೆಯನ್ನು ಅಭಿವ್ಯಕ್ತಪಡಿಸಿದ್ದಾರೆ. ಗೊರೂರರ ಕಥೆಗಳು ಗ್ರಾಮೀಣ ಬದುಕಿನ ಸ್ವರೂಪಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಗ್ರಾಮೀಣ ಸಮಾಜ, ಅಲ್ಲಿನ ಸಂಸ್ಕೃತಿ, ನಂಬಿಕೆ, ಆಚಾರ, ಮೌಲ್ಯಗಳನ್ನು ಸಹಾನುಭೂತಿಯಿಂದ ಚಿತ್ರಿಸಿದ್ದಾರೆ. ಇವುಗಳ ಹಿನ್ನೆಲೆಯಲ್ಲಿ ಮಹಿಳೆಯ ಸ್ಥಾನವನ್ನು ಕತೆಯ ಮೂಲಕ ಗುರುತಿಲಾಗಿದೆ.

ಈ ಎಲ್ಲಾ ಕಥೆಗಳಲ್ಲಿ ಬರುವ ಪಾತ್ರಗಳು ನಮ್ಮ ಸುತ್ತಮುತ್ತಲಿನ ಪರಿಚಯವಿರುವ ವ್ಯಕ್ತಿಗಳಂತೆ ಅನ್ನಿಸಿಬಿಡುವಷ್ಟು ವಿಶಿಷ್ಟವಾಗಿದೆ. ತಮ್ಮ ಸುತ್ತಮುತ್ತಲಿನ ಸಾಮಾಜಿಕ ಚಿತ್ರಣವನ್ನು ಕಥೆಯ ಮೂಲಕ ಸಮಗ್ರವಾಗಿ ಕಣ್ಣಿಗೆ ಕಟ್ಟುವಂತೆ ಕಟ್ಟಿಕೊಟ್ಟಿದ್ದಾರೆ. ಗ್ರಾಮೀಣ ಬದುಕಿನ ಚಿತ್ರಣವನ್ನು ಕತೆಗಾರರು ತಮ್ಮ ಕಥೆಗಳಲ್ಲಿ ನೈಜವಾಗಿ ಚಿತ್ರಿಸಿರುವುದು ವಿಶೇಷ. ಗ್ರಾಮೀಣ ಪರಿಸರವನ್ನು ಚಿತ್ರಿಸುವಾಗ ಸಮಾಜದಲ್ಲಿನ ಓರೆ ಕೋರೆಗಳನ್ನು, ಮೌಲ್ಯಗಳನ್ನು ಚಿತ್ರಿಸುವುದರ ಜೊತೆಗೆ ಪ್ರತಿಕ್ರಿಯಿಸಿದವರು. ಹಸಿವು, ಬಡತನ, ನಿರುದ್ಯೋಗ, ಅನಕ್ಷರತೆ, ಜಾತಿ ವೈಶಮ್ಯ, ವಿಧವಾಸಮಸ್ಯೆ, ವಿಧವಾ ವಿವಾಹ ಮೊದಲಾದ ವಿಷಯಗಳನ್ನು ಇವರ ಕಥೆಗಳು ಕೇಂದ್ರೀಕರಿಸಿಕೊಂಡಿವೆ. ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಅಥವಾ ಸ್ತ್ರೀಯರನ್ನು ಚಿತ್ರಿಸುವಾಗ ಅಂದಿನ ಸಾಮಾಜಿಕ ಸ್ಥಿತಿಗತಿಗಳಿಗೆ, ಸಮಾಜದ ಕಟ್ಟುಪಾಡುಗಳಿಗೆ ಸಿಕ್ಕಿಬಿದ್ದು ನಲುಗುವ ಕೆಲವು ಪಾತ್ರಗಳು ಕಂಡು ಬಂದರೆ ಮತ್ತೊಂದೆಡೆ ಬಂಡಾಯ ಮನೋಧರ್ಮವುಳ್ಳ ಸಮಕಾಲೀನ ಪ್ರಜ್ಞೆಯನ್ನು ಹೊಂದಿರುವ ಪಾತ್ರಗಳು ಕಥೆಯಲ್ಲಿ ಜೀವಂತವಾಗಿ ಉಳಿದಿವೆ. ಇಂತಹ ಪಾತ್ರಗಳೇ ಗಂಡುಬೀರಿ ಹೊಸಬಿ, ಪುಟ್ಟಮಲ್ಲಿಗೆ, ಲಲಿತೆ. ಈ ಪಾತ್ರಗಳೆಲ್ಲವೂ ಓದುಗರ ಮನಸ್ಸಿನಲ್ಲಿ ಇಂದಿಗೂ ಜೀವಂತವಾಗಿ ಉಳಿದಿವೆ. ಗೊರೂರರು ಎಂದ ಕೂಡಲೇ ಗೊರೂರು ಗ್ರಾಮ ಹಾಗೂ ಅವರ ಜೀವನಾಡಿ ಹೇಮಾವತಿ ನದಿ, ಅವರ ಹಾಸ್ಯ ಶೈಲಿ, ಅವರ ಕಥೆಯಲ್ಲಿ ಸೃಷ್ಟಿಯಾಗಿರುವ ಪಾತ್ರಗಳು ಹಾಗೂ ಆ ಪರಿಸರದಲ್ಲಿ ಬೆಳೆದು ತಮ್ಮ ಬದುಕಿನಲ್ಲಿ ಕಂಡುಕೊಂಡ ವ್ಯಕ್ತಿಗಳು ಸಾಹಿತ್ಯ ಚರಿತ್ರೆಯಲ್ಲಿ ಓದುಗರ ಮನಸ್ಸಿನಲ್ಲಿ ಅಜರಾಮರವಾಗಿ ಉಳಿದುಕೊಂಡಿವೆ. ಈ ಮೇಲಿನ ಎಲ್ಲಾ ಕಥೆಗಳನ್ನು ಗಮನಿಸಿ ಹೇಳುವುದಾದರೆ ಕತೆಗಾರರು ಸಾಮಾನ್ಯ ಜನರೊಂದಿಗೆ ಮುಖಾಮುಖಿಯಾಗಿರುವುದು ಇವರ ಬರವಣಿಗೆಯಿಂದಲೇ ಕಂಡು ಬರುತ್ತದೆ. ಕೆಲವು ಕಡೆ ಸಮಾಜದಲ್ಲಿರುವ ತಪ್ಪುಗಳನ್ನು

ತಿದ್ದಲು ಸಂಪ್ರದಾಯದ ಜೊತೆಗೆ ಹೊಂದಾಣಿಕೆ ಮಾಡಿಕೊಂಡಂತೆ ಕಾಣುತ್ತದೆ. ಸಂಪ್ರದಾಯವನ್ನು ಬಿಡದೆ ಒಪ್ಪಿಕೊಂಡಂತೆ ಗೋಚರಿಸಿದರೂ ಗೊರೂರರು ಗಾಂಧೀಜಿಯವರ ಸರಳ ಜೀವನ, ಅವರ ದೃಷ್ಟಿಕೋನವನ್ನು ಮಾತ್ರ ಒಪ್ಪಿಕೊಂಡು ಬರೆದಿದ್ದಾರೆ ಎಂಬುದು ಓದುಗರ ತಾತ್ವಿಕ ವಿವೇಚನೆಗೆ ಬಿಟ್ಟಿದ್ದು.

**ಕೊನೆ ಟಿಪ್ಪಣಿಗಳು:**

1. ಶೇಷಗಿರಿ ರಾವ್ ಎಲ್. ಎಸ್. (2010). ಸಮಗ್ರ ವಿಮರ್ಶಾ ಸಾಹಿತ್ಯ: ಸಂಪುಟ–7. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು. ಪು.ಸಂ. 465

**ಪರಾಮರ್ಶನ ಗ್ರಂಥಗಳು:**

1. ಕಮಲಾ ನರಸಿಂಹ (ಸಂ). (2005). ಹೇಮಾವತಿಯ ಚೇತನ. ಸುಮುಖ ಪ್ರಕಾಶನ. ಬೆಂಗಳೂರು.
2. ಗೊರೂರು ರಾಮಸ್ವಾಮಿ ಅಯ್ಯಂಗಾರ್. (1967). ವೈಯ್ಯಾರಿ. ಐ.ಬಿ.ಎಚ್. ಪ್ರಕಾಶನ. ಬೆಂಗಳೂರು.
3. ನಾಯಕ ಹಾ. ಮಾ. (ಸಂ). (1973). ಗೊರೂರು ಗೌರವ ಗ್ರಂಥ. ಗೊರೂರು ಗೆಳೆಯರ ಬಳಗ. ಮೈಸೂರು.
4. ಶೇಷಗಿರಿರಾವ್ ಎಲ್. ಎಸ್. (2010). ಸಮಗ್ರ ವಿಮರ್ಶಾ ಸಾಹಿತ್ಯ: ಸಂಪುಟ–7. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.
5. ವೆಂಕಟಯ್ಯ ಸಿ. ಜಿ. (20080). ಗೊರೂರು ರಾಮಸ್ವಾಮಿ ಅಯ್ಯಂಗಾರ್. ಕರ್ನಾಟಕ ಜಾನಪದ ಪರಿಷತ್ತು. ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.